# ೧ನೇ ಅಪರ ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ನಾಗಮಂಗಲ.

## ಸಿ.ಸಿ. 213/2023

ಸಾಕ್ಷಿದಾರರ ಹೇಳಿಕೆಃ

| | | |
|---|---|---|
| ಹೆಸರು | ಃ ಪ್ರಸನ್ನ ಸಿ | ಚಾಸಾಃ **5** ಪ್ರಾಸಾಃ **3** |
| ತಂದೆಯ ಹೆಸರು | ಃ ಕೃಷ್ಣೇಗೌಡ ಸಿ ಜೆ | |
| ವಯಸ್ಸು | ಃ **46** ವರ್ಷ | |
| ವೃತ್ತಿ | ಃ ವ್ಯವಸಾಯ | |
| ವಾಸಸ್ಥಳ | ಃ ಚೋಳೇನಹಳ್ಳಿ ಕೊಪ್ಪಲು ಗ್ರಾಮ | |

ದಿನಾಂಕಃ **14.11.2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ

ಚಾಸಾ.**1** ಮತ್ತು **6** ನನಗೆ ಗೊತ್ತು. ಅಮಾನತ್ತು ಮಹಜರನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅಮಾನತ್ತು ಮಹಜರನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-**9(ಬಿ)** ಎಂದು ಗುರುತಿಸಲಾಯಿತು. ನಿಪಿ-9 ದಾಖಲೆಗೆ ಸುಮಾರು 2 ವರ್ಷಗಳ ಹಿಂದೆ ಪೋಲಿಲಸ್ ಠಾಣೆಗೆ ಬಂದಿದ್ದಾಗ ಸಹಿ ಮಾಡಿರುತ್ತೇನೆ. ಆಗ ಸಮಯ ಎಷ್ಟು ಆಗಿತ್ತು ಎಂದು ನನಗೆ ನೆನಪಿಲ್ಲ. ನಿಪಿ.9 ರಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ನನ್ನ ಸಮಕ್ಷಮ ಏನನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ, ನಿಪಿ-9 ಅನ್ನು ನನಗೆ ಓದಿ ಹೇಳಿಲ್ಲ. ನಿಪಿ-9 ರಲ್ಲಿ ಬರೆದಿರುವ ವಿಚಾರವು ನನಗೆ ಗೊತ್ತಿಲ್ಲ. ನನ್ನ ಜೊತೆ ನಿಪಿ.9 ಕ್ಕೆ ನಾನು ಮಾತ್ರ ಸಹಿ ಮಾಡಿರುತ್ತಾನೆ. ಸಾಕ್ಷಿಗೆ ಕಡತದಲ್ಲಿರುವ ಕೆಎ 53 ಎಎ 1297 ರ ಕಾರಿನ ಪೋಟೋಗಳನ್ನು ತೋರಿಸಲಾಗಿ

ನಮ್ಮ ಊರಿನ ಹುಡುಗರಿಗೆ ಅಪಘಾತವಾಗಿದ್ದ ಸಂಬಂಧ ಸದರಿ ಪೋಟೋವನ್ನು ತೆಗೆದು ಕೊಳ್ಳಲಾಗಿರುವುದಾಗ ಸಾಕ್ಷಿಯು ನುಡಿದಿರುತ್ತಾರೆ . ಸಾಕ್ಷಿನೋಡಿ ಗುರುತಿಸಿದ ಪೋಟೋಗಳನ್ನು ಈಗಾಗಲೇ ನಿಪಿ.10 ರಿಂದ 15 ಎಂದು ಗುರುತಿಸಲಾಗಿರುತ್ತದೆ.

ಸದರಿ ಸಾಕ್ಷಿಯನ್ನುಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲುಃ ಸ.ಸ.ಅ.ರಿಂದಃ</u>

ಸಂಜೆ 5.45 ಗಂಟೆಯಿಂದ ಸಂಜೆ 6.30 ರ ಅವಧಿಯಲ್ಲಿ ಗ್ರಾಮಾಂತರ ಪೋಲೀಸ್ ಆವರಣದಲ್ಲಿ ಪೋಲೀಸರು ನಿಪಿ.10 ರಿಂದ 15 ರಲ್ಲಿ ಕಾಣುವ ಕೆಎ-53-ಎಎ 1297 ರ ಕಾರನ್ನು ನನ್ನ ಮತ್ತು ಚಾಸಾ 6 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡು ಮಹಜರು ಕ್ರಮ ಜರುಗಿಸಿದರು ಎಂದರೆ ಸರಿ. ಚಾಸಾ.17 ರವರು ಈ ಪ್ರಕರಣದಲ್ಲಿ ಅಪಘಾತಕ್ಕೆ ಒಳಗಾದ ಕಾರನ್ನು ಅಮಾನತ್ತು ಪಡಿಸಿಕೊಳ್ಳುವ ಸಲುವಾಗಿ ಠಾಣೆಗೆ ತಂದಿರುವುದಾಗಿ ನಮಗೆ ಹೇಳಿದ್ದರು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ, ನಮ್ಮ ಸಹಿ ಬೇಕು ಎಂದು ಸಹಿಯನ್ನು ಪಡೆದರು ಎಂದು ನುಡಿಯುತ್ತಾರೆ. ಸದರಿ ಕಾರನ್ನು ಚಾಸಾ 1 ರವರು ಮಹಜರು ಸಲುವಾಗಿ ತೋರಿಸಿದರು ಎಂದರೆ ಸಾಕ್ಷಿಯು ಅದು ಯಾವುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈಗ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯವಾಗಲೆಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

**1** ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನಾಗಮಂಗಲ.